
ಬೆವಿಕಂ
BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-8, ಸಂಚಿಕೆ-1 ತ್ರೈಮಾಸಿಕ ಜನವರಿ–ಮಾರ್ಚ್ 2021 ಪುಟಗಳು-12



## ಬೆವಿಕಂ ವ್ಯಾಪ್ತಿಗೆ ಒಳಪಡುವ ಎಲ್ಲಾ ಕಛೇರಿಗಳಲ್ಲಿ ದಿನಾಂಕ 14.12.2020 ರಿಂದ 19.12.2020 ರ ವರೆಗೆ ಸಕಾಲ ಸಪ್ತಾಹವನ್ನು ಯಶಸ್ವಿಯಾಗಿ ಆಚರಿಸಲಾಯಿತು.



















ಆತ್ಮೀಯರಾದ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಅಧಿಕಾರಿ-ಸಿಬ್ಬಂದಿ ಸಹೋದ್ಯೋಗಿ ಮಿತ್ರರಿಗೆ ಹೊಸ ವರ್ಷದ ಶುಭಾಶಯಗಳು.

ಕಳೆದ ವರ್ಷ ಜಾಗತಿಕ ಮಟ್ಟದಲ್ಲಿಯೇ ಮನುಕುಲ ಅಪಾರವಾದ ಸಂಕಷ್ಟವನ್ನು ಅನುಭವಿಸಿದ ವರ್ಷ. ತಮ್ಮ ಸಂಕಲ್ಪ ಶಕ್ತಿ ಮತ್ತು ಸಹಕಾರದಿಂದ ಕೋವಿಡ್-19 ಸಾಂಕ್ರಾಮಿಕ ರೋಗದ ವಿರುದ್ಧ ಜನತೆ ಹೋರಾಡಿ ಅದನ್ನು ನಿಯಂತ್ರಿಸುವಲ್ಲಿ ಯಶಸ್ಸು ಸಾಧಿಸಿದ್ದಾರೆ. ಬೆಸ್ಕಾಂ ಅಧಿಕಾರಿ-ಸಿಬ್ಬಂದಿ ಸಹ ಸರ್ಕಾರದ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸಿ ಸಾಂಕ್ರಾಮಿಕ ರೋಗದ ವಿರುದ್ಧದ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ ಶ್ಲಾಘನೆಗೆ ಅರ್ಹರಾಗಿದ್ದಾರೆ.

ಸಂಕಷ್ಟದ ಗತ ವರ್ಷದ ಅಡ್ಡಿಗಳನ್ನು ದಾಟಿ ಭರವಸೆಯ ಹೊಸ ವರ್ಷಕ್ಕೆ ಕಾಲಿಟ್ಟಿರುವ ಈ ಸನ್ನಿವೇಶದಲ್ಲಿ ನಾವು ಮತ್ತಷ್ಟು ಹುರುಪಿನಿಂದ ಕಾರ್ಯೋನ್ಮುಖವಾಗಬೇಕಿದೆ. ಅವಶ್ಯಕ ಸೇವೆಯನ್ನು ಒದಗಿಸುವ ಒಂದು ಸಂಸ್ಥೆಯಾಗಿ ಬೆಸ್ಕಾಂ ಯಾವಾಗಲೂ ತನ್ನ ಗ್ರಾಹಕರಿಗೆ ಗುಣಮಟ್ಟದ ವಿದ್ಯುತ್ ಪೂರೈಸುವ ಸೇವೆಯನ್ನು ಆದ್ಯತೆಯ ಮೇರೆಗೆ ನಿರ್ವಹಿಸುತ್ತಾ ಬಂದಿದೆ. ಕೋವಿಡ್‌ನ ಸಂಕಷ್ಟದ ಸಮಯದಲ್ಲಿಯೂ ತನ್ನ ಧ್ಯೇಯೋದ್ದೇಶಗಳನ್ನು ಬೆಸ್ಕಾಂ ಅಚಲವಾಗಿ ಪಾಲಿಸಿಕೊಂಡು ಬರುತ್ತಿದೆ. ನೂತನ ವರ್ಷದಲ್ಲೂ ಸಹ ನಾವು ಗ್ರಾಹಕರ ಸೇವೆಯಲ್ಲಿ ಮತ್ತಷ್ಟು ಉನ್ನತ ಮಟ್ಟಕ್ಕೆ ಏರುವ ಆಶಯದೊಡನೆ ಕಾರ್ಯೋನ್ಮುಖರಾಗೋಣ. ಉದ್ಭವವಾಗುವ ಹೊಸ ಸವಾಲುಗಳನ್ನು ಕ್ರಿಯಾಶೀಲತೆಯಿಂದ ಎದುರಿಸೋಣ.

ನೂತನ ವರ್ಷದಲ್ಲಿ ಸಂಕ್ರಾಂತಿಯೊಡನೆ ಹಬ್ಬಗಳ ಸಾಲು ಆರಂಭವಾಗಲಿದೆ. ಸಂಕ್ರಾಂತಿ ಪರಿವರ್ತನೆಯ ಸಂಕೇತ. ಹೊಸ ಆಶಯಗಳೊಡನೆ ಬದುಕನ್ನು ಆರಂಭಿಸುವುದಕ್ಕೆ ಅದು ನಾಂದಿ. ಗ್ರಾಹಕರ ಸೇವೆಯಲ್ಲಿ ಮತ್ತಷ್ಟು ಉತ್ಸಾಹ ಮತ್ತು ಅರ್ಪಣಾ ಮನೋಭಾವದಿಂದ ತೊಡಗಿಸಿಕೊಂಡು, ವಿದ್ಯುತ್ ಪೂರೈಕೆಯ ಸೇವೆಯಲ್ಲಿ ರಾಷ್ಟ್ರದ ಅಗ್ರ ಗಣ್ಯ ಸಂಸ್ಥೆಯನ್ನಾಗಿ ಬೆಸ್ಕಾಂ ಸಂಸ್ಥೆಯನ್ನು ರೂಪಿಸಲು ನಾವು ಒಟ್ಟಾಗಿ ಪಣತೊಡೋಣ.

**ಎಂ.ಬಿ.ರಾಜೇಶ್‌ಗೌಡ**
ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ

## ಸಂಪಾದಕೀಯ



ಆತ್ಮೀಯರೆ,

ನಿಮ್ಮ "ಬೆಸ್ಕಾಂ ಸ್ನೇಹಿ" ತ್ರೈಮಾಸಿಕ ಈಗ ಎಂಟನೇ ವರ್ಷಕ್ಕೆ ಕಾಲಿಟ್ಟಿದೆ. ಪತ್ರಿಕೆಯ ಇಲ್ಲಿಯವರೆಗಿನ ಹಾದಿಯಲ್ಲಿ ನಮ್ಮ ಸಿಬ್ಬಂದಿ ಹಾಗೂ ಅಧಿಕಾರಿಗಳು ಉತ್ತಮ ರೀತಿಯಲ್ಲಿ ಸ್ಪಂದಿಸಿದ್ದೀರಿ. ಹೆಚ್ಚಿನವರು ಒಳ್ಳೆಯ ಲೇಖನ, ಪ್ರವಾಸದ ಅನುಭವ, ಕವಿತೆಗಳನ್ನು ಬರೆದು ಕಳುಹಿಸುವ ಮೂಲಕ ಪ್ರೋತ್ಸಾಹಿಸಿದ್ದೀರಿ. ಬೆಸ್ಕಾಂ ವ್ಯಾಪ್ತಿಯಲ್ಲಿರುವ ಸಿಬ್ಬಂದಿ ಮತ್ತು ಅಧಿಕಾರಿಗಳ ಸುಪ್ತಪ್ರತಿಭೆಯನ್ನು ಅಭಿವ್ಯಕ್ತಿಸಲು ವೇದಿಕೆಯಾಗಿರುವುದೇ ಈ ಗೃಹಪತ್ರಿಕೆ. ಅದಕ್ಕಾಗಿ ಹೆಚ್ಚು ಲೇಖನಗಳನ್ನು ಕಳುಹಿಸುವ ಮೂಲಕ ವಿಚಾರಗಳನ್ನು ಹಂಚಿಕೊಳ್ಳುತ್ತೀರೆಂಬ ನಿರೀಕ್ಷೆ ನಮ್ಮದು.

2021ಕ್ಕೆ ಪದಾರ್ಪಣೆ ಮಾಡಿದ್ದೇವೆ. ಕಳೆದ ವರ್ಷವಂತೂ "ಕೋವಿಡ್ – 19" ರ ಏಳು-ಬೀಳುಗಳೊಂದಿಗೆ ಕಳೆಯಿತು. ಆರೋಗ್ಯ ರಕ್ಷಣೆಗಾಗಿ ಪ್ರತಿಯೊಬ್ಬರೂ ಎಚ್ಚರ ವಹಿಸಿ ಕಾರ್ಯ ನಿರ್ವಹಿಸಿದ್ದೇವೆ. ಈಗ ಕೋವಿಡ್ ಸಾಕಷ್ಟು ಪ್ರಮಾಣದಲ್ಲಿ ನಿಯಂತ್ರಣಕ್ಕೆ ಬರುತ್ತಿರುವುದು ಹಾಗೂ ಅದರ ತಡೆಗೆ ಲಸಿಕೆ ಹಾಕುವ ಕ್ರಮ ಜಾರಿಗೆ ಬರುತ್ತಿರುವುದು ಸಮಾಧಾನಕರ ವಿಚಾರವಾಗಿದೆ. ಆದರೂ ಎರಡನೇ ಅಲೆ ಬಗ್ಗೆ ತಜ್ಞರು ಹೇಳುತ್ತಿರುವುದು ಗಮನಿಸಬೇಕಾದ ಸಂಗತಿ. ಮುಂದಿನ ದಿನಗಳಲ್ಲಿ ಪ್ರತಿಯೊಬ್ಬರೂ ಸಾಕಷ್ಟು ಎಚ್ಚರ ವಹಿಸಬೇಕಾದ ಅನಿವಾರ್ಯತೆಯನ್ನು ಸರ್ಕಾರದ ವತಿಯಿಂದ ಹೇಳಲಾಗುತ್ತಿದೆ. ಆ ನಿಟ್ಟಿನಲ್ಲಿ ಆರೋಗ್ಯ ಕಾಪಾಡಿಕೊಳ್ಳಲು ತಾವೆಲ್ಲರೂ ನಿಗಾವಹಿಸುವಿರೆಂದು ಭಾವಿಸಿದ್ದೇನೆ.

ಕಳೆದ ವರ್ಷ ವಿದ್ಯುತ್ ಸಮಸ್ಯೆಯನ್ನು ದೊಡ್ಡ ಪ್ರಮಾಣದಲ್ಲಿ ಎದುರಿಸದಿದ್ದರೂ ಲಭ್ಯವಿರುವ ವಿದ್ಯುತ್ ಅನ್ನು ಗ್ರಾಹಕರಿಗೆ ಸರಬರಾಜು ಮಾಡುವಲ್ಲಿ ತಾವೆಲ್ಲರೂ ಸಕ್ರಿಯವಾಗಿ ಕಾರ್ಯನಿರ್ವಹಿಸಿದ್ದೀರಿ. ವಿದ್ಯುತ್ ಗ್ರಾಹಕರ ಹಿತರಕ್ಷಣೆ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಆ ನಿಟ್ಟಿನಲ್ಲಿ ಹೊಸ ವರ್ಷದಲ್ಲಿ ಕೂಡ ನಾವೆಲ್ಲರೂ ಕಾರ್ಯೋನ್ಮುಖರಾಗೋಣ. ಗ್ರಾಹಕರ ಸಮಸ್ಯೆಗಳಿಗೆ ಸೂಕ್ತ ರೀತಿಯಲ್ಲಿ ಸ್ಪಂದಿಸೋಣ.

ತಮ್ಮೆಲ್ಲರಿಗೂ ಹೊಸವರ್ಷ ಹಾಗೂ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು.

ವಿದ್ಯುತ್ ಕ್ಷೇತ್ರಕ್ಕೆ ಹೊಸ ವರ್ಷ ಆಶಾದಾಯಕವಾಗಿರಲಿ ಎಂದು ಹಾರೈಸೋಣ.

ವಂದನೆಗಳೊಂದಿಗೆ.

**ಶ್ರೀ ಬಿ.ಆರ್.ಸೋಮಶೇಖರ್**
ಪ್ರಧಾನ ವ್ಯವಸ್ಥಾಪಕರು (ಗ್ರಾಸಂ), ಬೆವಿಕಂ

# ನಮ್ಮ ಊರು, ನಮ್ಮ ಜಿಲ್ಲೆ - ಹಾಸನ



**ಹಾಸನ ಜಿಲ್ಲೆ ಶಿಲ್ಪ ಕಲೆ ಮತ್ತು ಪ್ರಕೃತಿ ಸೌಂದರ್ಯದ ನಾಡು.**

ಮೌರ್ಯರು, ಚಾಲುಕ್ಯರು, ಹೊಯ್ಸಳರು, ಕದಂಬರು, ವಿಜಯನಗರದ ಅರಸರು ಆಳಿದ ಪ್ರದೇಶ ಈ ಜಿಲ್ಲೆ.

ತನ್ನಲ್ಲಿರುವ ಶಿಲ್ಪಕಲಾ ಮತ್ತು ಸಾಂಸ್ಕೃತಿಕ ವೈಭವದಿಂದಾಗಿ ವಿಶ್ವಮಟ್ಟದ ಸ್ಥಾನಮಾನಕ್ಕೆ ಪಾತ್ರವಾಗಿದೆ.

ಹಾಸನ, ಅರಸೀಕೆರೆ, ಆಲೂರು, ಅರಕಲಗೂಡು, ಬೇಲೂರು, ಚನ್ನರಾಯಪಟ್ಟಣ, ಹೊಳೆನರಸೀಪುರ, ಸಕಲೇಶಪುರ ಸೇರಿದಂತೆ ಒಟ್ಟು 8 ತಾಲ್ಲೂಕುಗಳನ್ನು ಹೊಂದಿರುವ ಈ ಜಿಲ್ಲೆಯ ಜನಸಂಖ್ಯೆ ಅಂದಾಜು 18 ಲಕ್ಷ.

ಹೇಮಾವತಿ ಮತ್ತು ಯಗಚಿ ನದಿಗಳು ಹರಿಯುವ ಜಿಲ್ಲೆಯಲ್ಲಿ ಭತ್ತ, ಕಬ್ಬು, ತೆಂಗು, ಆಲೂಗೆಡ್ಡೆ, ಮೆಕ್ಕೆಜೋಳ, ಕಾಫಿ, ಏಲಕ್ಕಿ ಹಾಗೂ ಅಡಿಕೆ ಪ್ರಮುಖ ಬೆಳೆಗಳು.

**ಹಾಸನಾಂಬಾ ದೇವಾಲಯ** : ಅನಾದಿಕಾಲದಿಂದಲೂ ಹಾಸನಾಂಬಾ ಹಾಸನದ ಗ್ರಾಮದೇವತೆ ಎಂಬ ನಂಬಿಕೆ ಇದೆ.

ಈ ದೇವಿಯ ದೇವಾಲಯದ ಬಾಗಿಲು ತೆರೆಯುವುದು ವರ್ಷಕ್ಕೊಮ್ಮೆ ಮಾತ್ರ. ಬಾಗಿಲು ಮುಚ್ಚುವ ದಿವಸ ಹಚ್ಚಿದ ದೀಪ ಉರಿಯುತ್ತಲೇ ಇರುತ್ತದೆ. ದೇವಿಗೆ ಮುಡಿಸಿದ ಹೂಗಳು ಕೂಡ ಬಾಡಿರುವುದಿಲ್ಲ ಎಂಬ ಪ್ರತೀತಿ ಇದೆ.

**ಗೊರೂರು ಜಲಾಶಯ** : ಅರಕಲಗೂಡಿಗೆ ಸಮೀಪದಲ್ಲಿರುವ ಗೊರೂರು ಗ್ರಾಮ ಇತಿಹಾಸ ಪ್ರಸಿದ್ಧ ಮತ್ತು ಪುರಾತನ



ಅಗ್ರಹಾರವಾಗಿದೆ. ಅಲ್ಲಿ ಹೇಮಾವತಿ ನದಿಗೆ ಅಣೆಕಟ್ಟೆಯನ್ನು ಕಟ್ಟಿ ವಿಶಾಲವಾದ ಜಲಾಶಯವನ್ನು ನಿರ್ಮಿಸಲಾಗಿದೆ.

ಅಣೆಕಟ್ಟೆಯ ಕೆಳಗೆ ಕೃಷ್ಣರಾಜಸಾಗರದ ಬೃಂದಾವನದ ಮಾದರಿಯಲ್ಲಿ ನಿರ್ಮಿಸಿರುವ ದೀಪಗಳ ವ್ಯವಸ್ಥೆ, ಹೂ ತೋಟಗಳು ಪ್ರವಾಸಿಗರ ಆಕರ್ಷಣೆಯಾಗಿವೆ.

**ಬೇಲೂರು ದೇವಾಲಯ** : ಹಾಸನದಿಂದ 37 ಕಿ.ಮೀ. ದೂರದ ಬೇಲೂರಿನಲ್ಲಿರುವ ಚನ್ನಕೇಶವ ದೇವಾಲಯ ವಿಶ್ವವಿಖ್ಯಾತಿ ಪಡೆದಿದೆ.

ಯಗಚಿ ನದಿಯ ತೀರದಲ್ಲಿರುವ ಬೇಲೂರು ನಗರವು ಹಿಂದೆ ಹೊಯ್ಸಳರ ರಾಜಧಾನಿಯಾಗಿತ್ತು. ಹಲವು ವೈವಿಧ್ಯತೆಗಳಿಂದ ಕೂಡಿದ ಈ ದೇವಾಲಯದ ಮುಖ್ಯ ಆಕರ್ಷಣೆ ಎಂದರೆ ಹೊರಗೋಡೆಯ ಸುತ್ತಲೂ ಕೆತ್ತಿರುವ ಶಿಲ್ಪಗಳು. ಇಲ್ಲಿ ಕಡೆದಿರುವ ಶಿಲಾಬಾಲಿಕೆಯರ ಚಿತ್ರಣವು ವಿಶ್ವದಲ್ಲಿಯೇ ಅತ್ಯಂತ ಶ್ರೇಷ್ಠವಾಗಿದ್ದು ಶಿಲ್ಪಗಳ ಕಲಾಕೌಶಲ್ಯಕ್ಕೆ ಸಾಕ್ಷಿಯಾಗಿದೆ. ದೇವಾಲಯದ ಮುಖ್ಯ ದೇವರು ಚನ್ನಕೇಶವ.

ಪ್ರತಿವರ್ಷವೂ ಬೇಸಿಗೆಯಲ್ಲಿ ಚನ್ನಕೇಶವನ ರಥೋತ್ಸವ ವಿಜೃಂಭಣೆಯಿಂದ ನಡೆಯುತ್ತದೆ. ಸುತ್ತ ಮುತ್ತಲಿನ ಹಳ್ಳಿಗಳಿಂದ ಸಾವಿರಾರು ಭಕ್ತಾದಿಗಳು ಆಗ ಇಲ್ಲಿ ಸೇರುತ್ತಾರೆ.

**ಹಳೇಬೀಡು** : ಹಾಸನ ಜಿಲ್ಲೆಯ ಇನ್ನೊಂದು ಪ್ರಮುಖ ಪ್ರವಾಸಿತಾಣ ಹಳೇಬೀಡು. ಈ ಊರಿಗೆ ಹಿಂದೆ ದ್ವಾರಸಮುದ್ರ ಎಂಬ ಹೆಸರಿತ್ತು.



ಸುಮಾರು ಮುನ್ನೂರು ವರ್ಷಗಳ ಹೊಯ್ಸಳ ಸಾಮ್ರಾಜ್ಯಕ್ಕೆ ರಾಜಧಾನಿಯಾಗಿದ್ದ ಇಲ್ಲಿ ದೇವಾಲಯಗಳು ಮತ್ತು ಜೈನ ಬಸದಿಗಳು ಪ್ರಮುಖ ಆಕರ್ಷಣೆ. ಇವುಗಳಲ್ಲಿ ಹೊಯ್ಸಳೇಶ್ವರ, ಕೇದಾರೇಶ್ವರ ಮತ್ತು ಪಂಚ ದೇವಾಲಯಗಳು ಮುಖ್ಯವಾದವು.

ದೇವಾಲಯದ ಸುತ್ತಲೂ ಅಲಂಕಾರ ಪಟ್ಟಿಕೆಗಳನ್ನೂ ಹೊಂದಿದೆ. ಸುಂದರವಾದ ಪಕ್ಷಿಗಳು, ಪುಷ್ಪಗಳು, ರಾಮಾಯಣ, ಮಹಾಭಾರತ ಮತ್ತು ಭಾಗವತದ ಕಥೆಗಳನ್ನು ಅತ್ಯಾಕರ್ಷಕವಾಗಿ ಬಿಡಿಸಲಾಗಿದೆ.

**ಬಿಸಿಲೆ ಘಾಟ್** : ಸಕಲೇಶಪುರದಿಂದ 32 ಕಿ.ಮೀ. ದೂರದಲ್ಲಿರುವ ಈ ಸ್ಥಳ ಪ್ರಕೃತಿ ಸೌಂದರ್ಯದ ತಾಣವಾಗಿದ್ದು ಎತ್ತರವಾದ ಪರ್ವತ ಶ್ರೇಣಿಗಳಿಂದ ಕೂಡಿದೆ.

ಕೆಳಗೆ ಆಳವಾದ ಪ್ರಪಾತದಲ್ಲಿ ಅನೇಕ ನದಿಗಳು ಹರಿಯುತ್ತವೆ. ಅಲ್ಲಲ್ಲಿ ಸುಂದರವಾದ ಜಲಪಾತಗಳು ನೋಡುವರ ಕಣ್ಮನಗಳನ್ನು ಸೆಳೆಯುತ್ತವೆ.


ಆಕಾಶದೆತ್ತರಕ್ಕೆ ಬೆಳೆದುನಿಂತ ಮರಗಳು, ಪಕ್ಷಿಗಳ ಚಿಲಿಪಿಲಿ ಕಲರವ, ದುಂಬಿಗಳ ಝೇಂಕಾರಗಳೆಲ್ಲವನ್ನೂ ಬಿಸಿಲೆ ಘಾಟಿನಲ್ಲಿ ನೋಡಬಹುದು.

**ಜೇನುಕಲ್ಲು ಸಿದ್ದೇಶ್ವರ ಬೆಟ್ಟ** : ಅರಸೀಕೆರೆ ಸಮೀಪದಲ್ಲಿ ಜೇನುಕಲ್ಲು ಸಿದ್ದೇಶ್ವರ ಬೆಟ್ಟವಿದೆ. ಸುಮಾರು ಸಾವಿರ ವರ್ಷಗಳ ಹಿಂದೆ ಶಿವಯೋಗಿ ಜೇನುಕಲ್ಲು ಸಿದ್ದೇಶ್ವರರು ಈ ಬೆಟ್ಟದಲ್ಲಿ ತಪಸ್ಸು ಮಾಡಿದ್ದರಂತೆ. ಬೆಟ್ಟದ ಬುಡದಲ್ಲಿ ಯಾದಪುರ ಎಂಬ ಹಳ್ಳಿ ಇದೆ. ಇಲ್ಲಿ ಗ್ರಾಮ ದೇವತೆ ಕೆಂಚಮ್ಮನ ದೇವಾಲಯವಿದೆ. ಕಲ್ಲಿನ ಕಂಬಗಳ ಮೇಲೆ ನಿರ್ಮಿಸಿರುವ ನಂದಿಯ ವಿಗ್ರಹ, ರಥಬೀದಿಯಲ್ಲಿರುವ ಭವ್ಯವಾದ ಗೋಪುರ, ಕಲ್ಲಿನ ಮಂಟಪ, ಇವು ಮನಮೋಹಕವಾಗಿವೆ. ✩

ಗ್ರಾಮದ ಮಧ್ಯಭಾಗದಲ್ಲಿ ಬಸವೇಶ್ವರ ದೇವಾಲಯವಿದ್ದು ಅಲ್ಲಿಯೇ ಸಿದ್ದೇಶ್ವರರು ವಾಸಿಸುತ್ತಿದ್ದರಂತೆ. ಅವರು ಕುಳಿತ ಭಾಗದಲ್ಲಿಯೇ ಬಸವೇಶ್ವರರ ವಿಗ್ರಹವನ್ನು ಸ್ಥಾಪಿಸಿದ್ದಾರೆ. ಬೆಟ್ಟದ ಮೇಲೆ ಹತ್ತಿದಾಗ ಬೃಹದಾಕಾರದ ಬಂಡೆಗಲ್ಲುಗಳು ವಿವಿಧ ಆಕಾರಗಳಲ್ಲಿ ಕಾಣುತ್ತವೆ. ಒಂದೆಡೆ ಹಕ್ಕಿ ಕುಳಿತಿರುವಂತೆ, ಮತ್ತೊಂದೆಡೆ ಭೂಮಿ ತಾಯಿಯ ನೋಟ, ಹೀಗೆ ರಮ್ಯವಾದ ಅನುಭವಗಳನ್ನು ನೀಡುತ್ತದೆ. ಇಲ್ಲಿ ಬಹಳಷ್ಟು ಜೇನುಗೂಡುಗಳಿವೆ. ಸಿದ್ದೇಶ್ವರ ಗೋಪುರ ಮಂಟಪದಲ್ಲಿ ಗುರುಗಳ ಪಾದದ ಗುರುತುಗಳಿವೆ.

ಹುಣ್ಣಿಮೆಯ ದಿನದಂದು ಸಾವಿರಾರು ಭಕ್ತರು ಇಲ್ಲಿಗೆ ಬರುತ್ತಾರೆ. ಅಂದು ಬೆಟ್ಟದ ಕೆಳಗೆ ಭಾರಿ ಜಾತ್ರೆ ಸೇರುತ್ತದೆ. ಈ ಬೆಟ್ಟದಲ್ಲಿ ಅನೇಕ ಅಮೂಲ್ಯ ವನಸ್ಪತಿ ಔಷಧಿ ಸಸ್ಯಗಳೂ ಇವೆ. ಇಲ್ಲಿಗೆ ಅರಸೀಕೆರೆಯಿಂದ ಉತ್ತಮ ಸಾರಿಗೆ ವ್ಯವಸ್ಥೆ ಇದೆ.

**ಶ್ರವಣ ಬೆಳಗೊಳ** : ಹಾಸನದಿಂದ 47 ಕಿ.ಮೀ ದೂರದಲ್ಲಿರುವ ಶ್ರವಣ ಬೆಳಗೊಳ ಕರ್ನಾಟಕದಲ್ಲಿ ಒಂದು ಪ್ರಸಿದ್ಧ ಜೈನ ಕ್ಷೇತ್ರವಾಗಿದೆ. ಗೊಮ್ಮಟೇಶ್ವರನ ಮಹಾಮೂರ್ತಿ ಇರುವ ಈ ಕ್ಷೇತ್ರ ಎರಡುಸಾವಿರ ವರ್ಷಗಳಿಗೂ ಹೆಚ್ಚಿನ ಸುದೀರ್ಘವಾದ ಇತಿಹಾಸವನ್ನು ಹೊಂದಿರುವ ಯಾತ್ರಾಸ್ಥಳ. ಎರಡು ಬೆಟ್ಟಗಳ ಸುಂದರ ಪರಿಸರದ ನಡುವೆ ಧವಳ ಸರೋವರದಿಂದ ಕೂಡಿದ ಈ ಪ್ರದೇಶ ಅಖಂಡ ಶಿಲ್ಪಕಲೆಯಲ್ಲಿ ಪರಾಕಾಷ್ಠೆಗೆ ಏರಿದೆ.



ಗಂಗರಸರ ಅಧಿಕಾರಿಯಾಗಿದ್ದ ಚಾವುಂಡರಾಯನು ಶ್ರವಣಬೆಳಗೊಳದಲ್ಲಿ ತನ್ನ ತಾಯಿಯ ಇಚ್ಛೆಯಂತೆ ವಿಂಧ್ಯಗಿರಿಯ ಶಿಖರದಲ್ಲಿ ಬಾಹುಬಲಿಯ ಮೂರ್ತಿಯನ್ನು ಕ್ರಿ.ಶ.981 ರಲ್ಲಿ ನಿರ್ಮಿಸಿದ.

ದೊಡ್ಡಬೆಟ್ಟ ಅಥವಾ ವಿಂಧ್ಯಗಿರಿ ಎಂದು ಕರೆಯುವ ಇಂದ್ರಗಿರಿ ಬೆಟ್ಟದ ಎತ್ತರ 3347 ಅಡಿ. ಇಡೀ ಬೆಟ್ಟವೇ ಒಂದು ಹೆಬ್ಬಂಡೆಯಂತಿದ್ದು ಇದನ್ನು ಹತ್ತಲು 614 ಮೆಟ್ಟಿಲುಗಳನ್ನು ಕೆತ್ತಲಾಗಿದೆ.

ವಿಂಧ್ಯಗಿರಿಯ ಶಿಖರದ ಪ್ರಶಾಂತ ವಾತಾವರಣದಲ್ಲಿ ಪ್ರತಿಮಾಯೋಗದಲ್ಲಿ ಉತ್ತರಾಭಿಮುಖವಾಗಿ ನಿಂತಿರುವ 58 ಅಡಿ ಎತ್ತರದ ವೈರಾಗ್ಯ ಚಕ್ರವರ್ತಿ ಬಾಹುಬಲಿಯ ಮೂರ್ತಿಯನ್ನು ಅಖಂಡ ಶಿಲೆಯಲ್ಲಿ ಕಡೆಯಲಾಗಿದೆ.

ಏಕಶಿಲೆಯಲ್ಲಿ ಕೆತ್ತಿದ ಈ ವಿಗ್ರಹ ವಿಶ್ವದಲ್ಲಿಯೇ ಎತ್ತರದ ಮೂರ್ತಿ ಎಂಬ ಖ್ಯಾತಿಯನ್ನು ಪಡೆದಿದೆ. ವಿಶಾಲವಾದ ಬಾಹುಗಳು ಉದ್ದದ ಕಿವಿಗಳು, ಸುರುಳಿ ಸುರುಳಿಯಾಗಿರುವ ತಲೆಕೂದಲು, ಪ್ರಸನ್ನತೆಯಿಂದ ಕೂಡಿದ ಮುಖದ ಬಾಹುಬಲಿಯ ನಗ್ನಮೂರ್ತಿ ನೋಡುಗರಿಗೆ ಭಕ್ತಿ ಭಾವನೆಯನ್ನು ಮೂಡಿಸುತ್ತದೆ.

ಇಂದ್ರಗಿರಿ ಮತ್ತು ಚಂದ್ರಗಿರಿ ಬೆಟ್ಟಗಳ ನಡುವೆ ಸುಂದರವಾದ ಪುಷ್ಕರಣಿಯೊಂದಿದೆ. ಗೊಮ್ಮಟೇಶ್ವರನಿಗೆ ಹನ್ನೆರಡು ವರ್ಷಕ್ಕೊಮ್ಮೆ ಮಹಾಮಸ್ತಕಾಭಿಷೇಕ ಮಹೋತ್ಸವವನ್ನು ನಡೆಸುತ್ತಾರೆ. ಈ ಸಮಾರಂಭಕ್ಕೆ ದೇಶದ ಎಲ್ಲಾ ಭಾಗಗಳಿಂದ ಜೈನ ಯಾತ್ರಾರ್ಥಿಗಳು ಮತ್ತು ಪ್ರವಾಸಿಗರು ಬರುತ್ತಾರೆ. ಶ್ರವಣಬೆಳಗೊಳದಲ್ಲಿ ಭಂಡಾರಿ ಬಸದಿ, ಅಕ್ಕನ ಬಸದಿ, ಶಾಂತಿನಾಥ ಬಸದಿ ಸೇರಿದಂತೆ ಹಲವಾರು ಜೈನ ಬಸದಿಗಳಿವೆ.



ಜೈನ ಧರ್ಮದ ಪ್ರತಿಬಿಂಬವಾಗಿ ಹಾಸನ ಜಿಲ್ಲೆಯಲ್ಲಿ ಅರಸೀಕೆರೆ, ಜಾವಗಲ್ಲು, ಅರಕಲಗೂಡು ಮುಂತಾದ ಪ್ರದೇಶಗಳಲ್ಲಿ ಜೈನ ಧರ್ಮದ ಐತಿಹಾಸಿಕ ಕುರುಹುಗಳನ್ನು ಕಾಣಬಹುದು. ಈ ಎಲ್ಲಾ ಜೈನ ಬಸದಿಗಳೂ ಹೊಯ್ಸಳ ಕಲಾ ಶೈಲಿಯನ್ನು ಹೊಂದಿವೆ, ಹಾಗೆಯೇ ಹೊಳೆನರಸೀಪುರದ ಕೋಟೆ ರಸ್ತೆಯಲ್ಲಿ ಭಗವಾನ್ ನೇಮಿನಾಥ ತೀರ್ಥಂಕರರ ಬಸದಿಯನ್ನು ನೋಡಬಹುದು.

ಈ ಬಸದಿಯ ಒಳಹೊಕ್ಕಾಗ ಸುಂದರ ಕೆತ್ತನೆಯ ಮೂಲಕ ವಾಸ್ತುಶಿಲ್ಪದ ಕುಶಲತೆಯನ್ನು ಕಾಣಬಹುದು.

ಈ ಬಸದಿಯನ್ನು ಸುಮಾರು 1115 ರಲ್ಲಿ ಮಹಾಮಂಡಲೇಶ್ವರ ವೀರಕೊಂಗಾಳ್ವದೇವನು ಕಟ್ಟಿಸಿದನೆಂದು ಶಾಸನಗಳಲ್ಲಿ ಉಲ್ಲೇಖ ಇದೆ.

**ರಾಮನಾಥಪುರ** : ಅರಕಲಗೂಡಿನಿಂದ 30 ಕಿ.ಮೀ. ದೂರದಲ್ಲಿರುವ ರಾಮನಾಥಪುರದಲ್ಲಿ ಕಾವೇರಿನದಿ ದಂಡೆಯ ಮೇಲೆ ನಿರ್ಮಾಣವಾಗಿರುವ ಚೋಳರು ಮತ್ತು ಹೊಯ್ಸಳರ ಕಾಲದ ಹಲವಾರು ದೇವಾಲಯಗಳಲ್ಲಿ ಇಲ್ಲಿನ ದೇವಾಲಯಗಳು ಪ್ರಮುಖವಾದವು.

ದಕ್ಷಿಣಕಾಶಿ ಎಂದು ಪ್ರಸಿದ್ಧಿಯಾಗಿರುವ ಈ ಊರಿನಲ್ಲಿ ಅನೇಕ ದೇವಾಲಯಗಳಿವೆ. ಅವುಗಳಲ್ಲಿ ಮುಖ್ಯವಾದವು ಪ್ರಸನ್ನ ರಾಮೇಶ್ವರ, ಸುಬ್ರಹ್ಮಣ್ಯೇಶ್ವರ, ಪಟ್ಟಾಭಿರಾಮ, ಅಗಸ್ತೇಶ್ವರ, ಆಂಜನೇಯ, ಲಕ್ಷ್ಮೀನರಸಿಂಹ ಮತ್ತು ದುರ್ಗದ ರಾಮೇಶ್ವರ ದೇವಾಲಯಗಳು.

ಹಾಸನದಿಂದ 12 ಕಿ.ಮೀ ದೂರದಲ್ಲಿರುವ ಮೊಸಳೆ ಗ್ರಾಮದಲ್ಲಿ ಎರಡು ತಲೆಮಾರಿನ ಶಿಲ್ಪಿಗಳು ರೂಪಿಸಿದ ಅವಳಿ ದೇವಾಲಯಗಳು ಹೆಚ್ಚು ಪ್ರಚಾರವಿಲ್ಲದೆ ನಿಂತಿವೆ.

ಈ ಅಗ್ರಹಾರದ ಚನ್ನಕೇಶವ ದೇವಾಲಯ ಮತ್ತು ನಾಗೇಶ್ವರ ಶಿವಾಲಯಗಳು ಅಕ್ಕ ಪಕ್ಕದಲ್ಲಿಯೇ ಇದ್ದು ವೈಷ್ಣವ ಶೈವ ದೇವಾಲಯಗಳಾಗಿ ಪರಧರ್ಮ ಸಹಿಷ್ಣುತೆಗೆ ಉತ್ತಮ ಉದಾಹರಣೆಗಳಾಗಿವೆ.

ಹೀಗಾಗಿ ಹಾಸನ ಜಿಲ್ಲೆ ಇತಿಹಾಸ ಪ್ರಸಿದ್ಧವಾದ ತಾಣವಾಗಿ ಪ್ರಾಮುಖ್ಯತೆ ಪಡೆದಿದೆ.


# ಸಾಧಕರು ಇವರು

## ಪ್ರೊ. ರೊದ್ದಂನರಸಿಂಹ

ಬೆಂಗಳೂರಿನ ಜವಾಹರಲಾಲ್ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರದಲ್ಲಿ ಸಕ್ರಿಯವಾಗಿ ಸಂಶೋಧನಾ ಕಾರ್ಯದಲ್ಲಿ ತೊಡಗಿಸಿ ಕೊಂಡಿದ್ದ ಪ್ರೊ. ರೊದ್ದಂನರಸಿಂಹ ಅವರು ಅಂತರರಾಷ್ಟ್ರೀಯ ಖ್ಯಾತಿಯ ವಿಜ್ಞಾನಿ.

ವಾತಾವರಣ ಮತ್ತು ವೈಮಾಂತರಿಕ್ಷ ಕ್ಷೇತ್ರದಲ್ಲಿ ಅದ್ಭುತ ಸಾಧನೆ ಮಾಡಿದ್ದ ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ದೊರೆತಿತ್ತು.

ಸ್ವಾತಂತ್ರ್ಯೋತ್ತರ ಭಾರತ ಕಂಡ ಅತ್ಯುತ್ತಮ ವಿಜ್ಞಾನಿ ಎಂಬ ಖ್ಯಾತಿಗೆ ಪಾತ್ರರಾಗಿದ್ದರೂ ಸರಳ ಹಾಗೂ ಸನ್ನಡತೆಗೆ ಹೆಸರಾಗಿದ್ದವರು.



ನರಸಿಂಹ ಅವರು **1933 ರ ಜುಲೈ 20 ರಂದು ಬೆಂಗಳೂರಿನಲ್ಲಿ ಜನಿಸಿದರು**. ಬಾಲ್ಯದಲ್ಲೇ ವಿಜ್ಞಾನದ ಬಗ್ಗೆ ತಮ್ಮ ತಂದೆ ಹಾಗೂ ವಿಜ್ಞಾನದ ಹೆಸರಾಂತ ಲೇಖಕರಾಗಿದ್ದ ಆರ್.ಎಲ್. ನರಸಿಂಹಯ್ಯ ಅವರಿಂದ ಪ್ರಭಾವಿತರಾಗಿದ್ದರು. 1953 ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದರು. 1955 ರಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಏರೋನಾಟಿಕಲ್ ಎಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಮಾಡಿದರು. ಬೆಂಗಳೂರು ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಅವರು ಪ್ರೊ. ಸತೀಶ್ ಧವನ್ ಅವರ ಮಾರ್ಗದರ್ಶನ ಪಡೆದರು. ಕ್ಯಾಲಿಫೋರ್ನಿಯಾ ಇನ್ಸ್ಟಿಟ್ಯೂಟ್‌ನಲ್ಲಿ ಪ್ರೊ.ಹಾನ್ಸ್ ಲೀಪ್ಮನ್ ಅವರ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯನ ಕೈಗೊಂಡು 1961 ರಲ್ಲಿ ಪಿಎಚ್.ಡಿ ಗಳಿಸಿದರು.

1962 ರಿಂದ 1999 ರವರೆಗೆ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ **ಏರೋಸ್ಪೇಸ್ ಎಂಜಿನಿಯರಿಂಗ್** ವಿಭಾಗದಲ್ಲಿ ಪ್ರೊಫೆಸರ್ ಆಗಿ ಸೇವೆ ಸಲ್ಲಿಸಿದರು. 1984 ರಿಂದ 1993 ವರೆಗೆ ರಾಷ್ಟ್ರೀಯ ವೈಮಾನಿಕ ಪ್ರಯೋಗಾಲಯ (ಎನ್ ಎ ಎಲ್) ದ ನಿರ್ದೇಶಕರಾಗಿದ್ದರು. ಐಎನ್‌ಎಸ್‌ಎ ಸಂಸ್ಥೆಯ ಜ್ಯೂಬಿಲಿ ರಿಸರ್ಚ್ ಪ್ರೊಫೆಸರಾಗಿ ಮತ್ತು ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು.

ರೊದ್ದಂನರಸಿಂಹ 2000 ರಿಂದ 2014 ರವರೆಗೆ ಬೆಂಗಳೂರಿನ ಜವಾಹರಲಾಲ್ ನೆಹರೂ ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರಿಸರ್ಚ್ ಸಂಸ್ಥೆಯಲ್ಲಿ ಮೆಕ್ಯಾನಿಕ್ ಇಂಜಿನಿಯರಿಂಗ್ ವಿಭಾಗದ ಚೇರ್ಮನ್ನರಾಗಿ ಸೇವೆ ಸಲ್ಲಿಸಿದ್ದರು. ಇಂಗ್ಲೆಂಡಿನ ಕ್ರೇಂಬ್ರಿಡ್ಜ್ ವಿಶ್ವವಿದ್ಯಾಲಯ, ನಾಸಾ ಲಾಂಗ್ಲೆ, ಸ್ಟ್ರಾಥ್‌ಕ್ಲೈಡ್ ವಿಶ್ವವಿದ್ಯಾಲಯ, ಬ್ರಸೆಲ್ಸ್ ವಿಶ್ವವಿದ್ಯಾಲಯ, ಅಡಿಲೇಡ್ ವಿಶ್ವವಿದ್ಯಾಲಯಗಳಲ್ಲೂ ಅವರ ಪ್ರಾಧ್ಯಾಪನ ಸಂದಿತ್ತು.

ರೊದ್ದಂ ಅವರು ರಾಜೀವ್‌ಗಾಂಧಿ ಪ್ರಧಾನ ಮಂತ್ರಿ ಆಗಿದ್ದಾಗ ಅವರ ವೈಜ್ಞಾನಿಕ ಸಲಹಾ ಮಂಡಳಿಯ ಸದಸ್ಯರಾಗಿದ್ದರು. 1992-1994 **ರವರೆಗೆ ಇಂಡಿಯನ್ ಅಕಾಡೆಮಿ ಆಫ್ ಸೈನ್ಸಸ್‌ನ ಅಧ್ಯಕ್ಷರಾಗಿದ್ದರು**. ಇಸ್ರೊ ಮತ್ತು ನಿಯಾಸ್‌ನಲ್ಲೂ ಅಮೂಲ್ಯ ಸೇವೆ ಸಲ್ಲಿಸಿದ್ದರು. ಭಾರತದಲ್ಲಿ ಸಾಮಾನ್ಯ ಜನರೂ ವಿಮಾನಯಾನ ಮಾಡಬೇಕು. ಸಣ್ಣ ನಗರಗಳ ಮಧ್ಯೆ ವಿಮಾನ ಸಂಚಾರ ಹೆಚ್ಚಾಗಬೇಕು ಎಂಬ ಉದ್ದೇಶದಿಂದ ವಿಮಾನಯಾನದ ವೆಚ್ಚ ಕಡಿಮೆ ಮಾಡುವ ನಿಟ್ಟಿನಲ್ಲಿ ಅದರ ರಚನೆ ಮತ್ತು ಏರೋಡೈನಮಿಕ್ಸ್‌ನಲ್ಲಿ ಸಾಕಷ್ಟು ಮಾರ್ಪಾಡುಗಳನ್ನು ಮಾಡಿದ್ದರು. ಭಾರತ ಸರ್ಕಾರದ ಉಡಾನ್ ಯೋಜನೆಗೂ ಸಲಹೆ ನೀಡಿದ್ದರು. ರೊದ್ದಂ ನರಸಿಂಹರು ಕಳೆದ 15 ವರ್ಷಗಳಿಂದ ಮೋಡಗಳ ಬಗ್ಗೆ ಸಂಶೋಧನೆಯಲ್ಲಿ ನಿರತರಾಗಿದ್ದರು. **ವಿಜ್ಞಾನ ಸಂಬಂಧಿತ ರಾಷ್ಟ್ರೀಯ ಭದ್ರತೆ ಮತ್ತು ಹಿತಾಸಕ್ತಿಗಳಲ್ಲಿ ಪ್ರಧಾನಮಂತ್ರಿಗಳ ಸಲಹೆಗಾರರಾಗಿಯೂ ಅವರ ಸೇವೆ ಸಂದಿತ್ತು. ಎಚ್‌ಎಎಲ್ ಸಂಸ್ಥೆಯ ನಿರ್ದೇಶಕ ಮಂಡಳಿಯಲ್ಲಿದ್ದರು.**

ಭಾರತೀಯ ತತ್ವಶಾಸ್ತ್ರ ಮತ್ತು ಪ್ರಾಚೀನ ಭಾರತದ ವಿಜ್ಞಾನಗಳ ಬಗ್ಗೆಯೂ ಅವರು ಸಾಕಷ್ಟು ಅಧ್ಯಯನ ನಡೆಸಿದ್ದರು.

**ಸುಮಾರು 200 ಮಹತ್ವದ ಸಂಶೋಧನಾ ಪ್ರಬಂಧಗಳನ್ನೂ 15 ಗ್ರಂಥಗಳನ್ನೂ ರಚಿಸಿದ್ದರು.**

ರೊದ್ದಂ ನರಸಿಂಹರಿಗೆ ಭಾರತ ಸರ್ಕಾರದ ಪದ್ಮಭೂಷಣ, ಪದ್ಮವಿಭೂಷಣ, ಫೆಲೋ ಆಫ್ ದಿ ರಾಯಲ್ ಸೊಸೈಟಿ ಸೇರಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದ ಅನೇಕ ಶ್ರೇಷ್ಠ ಗೌರವಗಳು ಸಂದಿದ್ದವು. ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಶ್ರೀನಿವಾಸರಾಮಾನುಜನ್ ಪದಕ, ರೂರ್ಕಿ, ಬನಾರಸ್, ಗುಲಬರ್ಗಾ ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್‌ಗಳೂ ಅವರಿಗೆ ಲಭಿಸಿದ್ದವು.

ಮಹಾನ್ ವಿಜ್ಞಾನಿಯಾಗಿದ್ದ ರೊದ್ದಂ ಅವರು 2020 ರ ಡಿಸೆಂಬರ್ 14 ರಂದು ತಮ್ಮ 87 ನೇ ವಯಸ್ಸಿನಲ್ಲಿ ನಿಧನರಾದರು. ✩

# ಸಾಧಕರು ಇವರು

## ಎಸ್.ಕೆ.ಕರೀಂಖಾನ್

**ಜನಪದ ಗೀತೆಗಳ ಸಂಗ್ರಹ ಹಾಗೂ ಗಾಯನದಿಂದ ಕನ್ನಡ ನಾಡಿನಲ್ಲಿ ಪ್ರಖ್ಯಾತರಾಗಿದ್ದ ಡಾ.ಎಸ್.ಕೆ.ಕರೀಂಖಾನ್ ಅವರದು ಬಹುಮುಖ ವ್ಯಕ್ತಿತ್ವ.**

ಕನ್ನಡದ ಜಾನಪದ, ರಂಗಭೂಮಿ, ಚಿತ್ರರಂಗ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ವಿಶಿಷ್ಟ ಕಾಣಿಕೆ ನೀಡಿರುವ ಕರೀಂಖಾನ್‌ರು ಅಪ್ರತಿಮ ದೇಶಾಭಿಮಾನಿಯಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ ಹಾಗೂ ಕರ್ನಾಟಕ ಏಕೀಕರಣಕ್ಕೆ ಹೋರಾಡಿದವರಾಗಿ ಕನ್ನಡ ನಾಡಿನ ಸಂಸ್ಕೃತಿಯಲ್ಲಿ ವಿಶಿಷ್ಟ ಸ್ಥಾನಗಳಿಸಿದ್ದಾರೆ.

**ಕರೀಂಖಾನರು 1900ರ ವರ್ಷದಲ್ಲಿ ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ ಜನಿಸಿದರು.** ಅಫ್ಘಾನಿಸ್ಥಾನದಲ್ಲಿ ಯೋಧರಾಗಿದ್ದ ಅವರ ತಂದೆ ಅಬ್ರು ರಹಮಾನ್ ಖಾನ್ ಅವರು ಮನೆಕಲಹದಿಂದ ದೇಶಬಿಟ್ಟು ಭಾರತಕ್ಕೆ ಬಂದವರು. ಕರೀಂಖಾನರ ತಾಯಿ ಜೈನಬ್ಬಿ ಅರಬ್ ಮೂಲದವರು. ಹಾಸನದಲ್ಲಿ 5ನೇ ತರಗತಿವರೆಗೆ ಕರೀಂಖಾನ್ ಅವರ ವಿದ್ಯಾಭ್ಯಾಸ ನಡೆಯಿತು.



ಬಾಲ್ಯದಲ್ಲಿ ತಂದೆಯನ್ನು ಕಳೆದುಕೊಂಡ ಅವರು ಮುಂದೆ ಅಣ್ಣನ ಆಶ್ರಯದಲ್ಲಿ ಬೆಳೆದರು ಅವರ ಗುರು ಆಚಂಗಿ ನಾರಾಯಣಶಾಸ್ತ್ರಿಗಳು ಬೀರಿದ ಪ್ರಭಾವ ಅಪಾರ.

ಹೈಸ್ಕೂಲ್ ತಲುಪುವ ವೇಳೆಗೆ ಕರೀಂಖಾನರು ಜನಪದ ಸಾಹಿತ್ಯದತ್ತ ಆಕರ್ಷಿತರಾದರು. ಹಿತ್ತಾಳೆ, ತಾಮ್ರ ಪಾತ್ರೆಗಳ ತಯಾರಿಕೆಗೆ ಪ್ರಸಿದ್ಧವಾಗಿದ್ದ ಶ್ರವಣಬೆಳಗೊಳದಿಂದ ಪಾತ್ರೆ ಪರಡಿಗಳನ್ನು ಗಾಡಿಗಳಲ್ಲಿ ಹೇರಿಕೊಂಡು ಊರೂರು ತಿರುಗುತ್ತ ಮಾರಾಟ ಮಾಡುತ್ತಿದ್ದ ವ್ಯಾಪಾರಿಗಳು ಸಕಲೇಶಪುರಕ್ಕೆ ಬಂದಾಗ, ಅವರ ಸರಕುಗಳನ್ನು ಇಳಿಸಿಕೊಳ್ಳುವುದಕ್ಕೆ ಕರೀಂಖಾನರ ಮನೆಯ ಮುಂದಿನ ಕೋಣೆಯನ್ನು ಬಿಟ್ಟುಕೊಡಲಾಗುತ್ತಿತ್ತು. ಸುತ್ತಲಿನ ಹಳ್ಳಿಗಳನ್ನು ತಿರುಗಿ ಬಂದ ವ್ಯಾಪಾರಿಗಳು ರಾತ್ರಿಯ ಹೊತ್ತು ಮನೆಯ ಮುಂದೆ ಗಾಡಿಗಳನ್ನು ನಿಲ್ಲಿಸಿಕೊಂಡು ಬಯಲಿನಲ್ಲಿಯೇ ಅಡುಗೆ ಮಾಡಿ ಉಂಡ ನಂತರ ಜನಪದ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿಕೊಳ್ಳುತ್ತಿದ್ದರು. ಹೀಗೆ ಜನಪದ ಗೀತೆಗಳನ್ನು ಹತ್ತಿರದಿಂದ ಕೇಳುವ ಅವಕಾಶ ಕರೀಂಖಾನ್‌ರಿಗೆ ದೊರೆಯಿತು.

ಜನಪದ ಗೀತೆಗಳ ನಾದ ಸೌಂದರ್ಯಕ್ಕೆ, ಭಾವಸೌಂದರ್ಯಕ್ಕೆ ಅವರು ಮಾರು ಹೋದರು.

ಮುಂದೆ ಕರೀಂಖಾನರು ಊರೂರು ತಿರುಗುತ್ತಿದ್ದಾಗ ಜನಪದ ಗೀತೆಗಳ ಸಂಗ್ರಹ ಮತ್ತು ಹಾಡುಗಾರಿಕೆ ಅವರ ಹವ್ಯಾಸ ಹಾಗೂ ಜೀವನೋಪಾಯವೂ ಆಯಿತು. ಕಾಂಗ್ರೆಸ್ ಚಳುವಳಿ, ಕರ್ನಾಟಕ ಏಕೀಕರಣ ಮುಂತಾದ ಚಳುವಳಿಗೆ ಜನಪದವನ್ನು ಅವರು ಪ್ರಚಾರದ ಮಾಧ್ಯಮವಾಗಿ ಉಪಯೋಗಿಸಿಕೊಂಡರು. ಜನಪದ ಗೀತೆಗಳನ್ನು ಭಾವ ತುಂಬಿ ಹಾಡುವ ಕಲೆ ಅವರಿಗೆ ಸಿದ್ಧಿಸಿತ್ತು. ಹಳ್ಳಿಯ ಬಯಲಿನಲ್ಲಿ ಯಾವುದಾದರೂ ಒಂದು ಮರದ ಕೆಳಗೆ ನಿಂತು ಅವರು ಹಾಡಲು ಪ್ರಾರಂಭಿಸುತ್ತಿದ್ದರೆ ಜನ ಇವರ ಸುತ್ತ ಜಮಾಯಿಸುತ್ತಿದ್ದರು. ಕರೀಂಖಾನರ ಹಾಡಿಗೆ ಆ ಕಾಲದ ಪಂಡಿತ ಪಾಮರರೆಲ್ಲಾ ಮಾರುಹೋಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ವಸಂತ ಮಹೋತ್ಸವ ಸಂದರ್ಭದಲ್ಲಿ ಕರೀಂಖಾನರು ಜನಪದ ಗೀತೆಗಳನ್ನು ಹಾಡಿ ವೇದಿಕೆಯಿಂದ ಕೆಳಗಿಳಿದು ಬಂದ ನಂತರ ನೀವು ಇನ್ನೊಂದೆರಡು ನಿಮಿಷ ಹಾಡಿದ್ದರೆ ನಾನು ಅತ್ತೇಬಿಡುತ್ತಿದ್ದೆ ಎಂದು ಸಾಹಿತಿ ಮಾಸ್ತಿಯವರು ಹೇಳಿದರಂತೆ. ಕರೀಂಖಾನರು ಹೆಣ್ಣೊಪ್ಪಿಸುವ ಹಾಡುಗಳನ್ನು ಹೇಳುವಾಗ ಸಭೆಯಲ್ಲಿದ್ದ ಎಲ್ಲ ಹೆಣ್ಣುಮಕ್ಕಳೂ ಅತ್ತುಬಿಡುತ್ತಿದ್ದರಂತೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಾಂಗ್ರೆಸ್ಸಿನ ಚಳುವಳಿಯಲ್ಲಿ ಭಾಗವಹಿಸಿ ಜೈಲು ಸೇರಿದ ಸಂದರ್ಭದಲ್ಲಿ ಅಲ್ಲಿದ್ದ ಜೊತೆಯ ಚಳುವಳಿಗಾರರೆಲ್ಲ ಅವರ ಹಾಡಿಗೆ ಮುಗಿಬೀಳುತ್ತಿದ್ದರಂತೆ.

ಗಾಂಧೀಜಿಯವರ ಪ್ರಭಾವದಿಂದ ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ತೀವ್ರವಾಗಿ ತೊಡಗಿಸಿಕೊಂಡ ಕರೀಂಖಾನ್‌ರಿಗೆ ಜೀವನೋಪಾಯ ಕಠಿಣವಾಯಿತು. ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡಿದ್ದಕ್ಕೆ ಅಧಿಕಾರಿಗಳು ಮನೆಯವರಿಗೆಲ್ಲಾ ತೊಂದರೆ ಕೊಡುತ್ತಿದ್ದುದರಿಂದ ಮನೆಯಿಂದ ದೂರಸರಿದರು. ಹೊಟ್ಟೆಪಾಡಿಗಾಗಿ ಜನಪದ ಗೀತೆಗಳ ಸಂಗ್ರಹಗಳನ್ನು ತಾವೇ ಪ್ರಕಟಿಸಿ ಮಾರಿದರು. ಈ ಸಂದರ್ಭದಲ್ಲಿ ಅವರು ರಂಗಭೂಮಿಯತ್ತಲೂ ಆಕರ್ಷಿತರಾದರು. ರಾಯಲ್ ಇಂಡಿಯನ್ ನೇವಿ ಎಂಬ ಸಂಸ್ಥೆಯಲ್ಲಿ ಮಿಲಿಟರಿ ಬ್ಯಾಂಕ್ ಉದ್ಯೋಗಿಗಳಿಗೆ ವೈರ್ಲೆಸ್ ವರ್ತಮಾನ ಕಳುಹಿಸುವ ಕೆಲಸ ಸಿಕ್ಕಿ ಮುಂಬೈಗೆ ಹೋದರು. ಹೆಚ್ಚು ಕಾಲ ಇರುವ ಮನಸ್ಸಾಗದೆ ಪುನಃ ಕರ್ನಾಟಕಕ್ಕೆ ಬಂದರು.

**ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಕರೀಂಖಾನ್ ಪ್ರಮುಖ ಪಾತ್ರವಹಿಸಿದರು. ಕರ್ನಾಟಕ ಸರ್ಕಾರದ 'ಜನಪದಶ್ರೀ' ಪ್ರಶಸ್ತಿ, ಜೀಶಂಪ ಜಾನಪದ ಪ್ರಶಸ್ತಿ, ಜಾನಪದ ಹರಿಕಾರ ಬಿರುದು, ನಾಡೋಜ ಪ್ರಶಸ್ತಿ ಇತ್ಯಾದಿ ಹಲವು ಗೌರವಗಳು ಅವರಿಗೆ ಸಂದಿವೆ.**

ಕರೀಂಖಾನರ ಜಾನಪದ ಗೀತೆಗಳ ಸಂಗ್ರಹಗಳಲ್ಲಿ ವಿವಿಧ ದೇವರುಗಳ ಕುರಿತ ಸ್ತುತಿ ಸಂಗ್ರಹಗಳು, ತವರು, ಬಳೆಗಾರ, ಹರಕೆ, ಜೋಗುಳ, ಕಾವಲಿಯ ಹಾಡು, ಹೈಬಾಳು, ಹಗರಣ, ಕಹಿಬಾಳು(ಪಾಂಡವರ ಕಷ್ಟಗಳನ್ನು ಕುರಿತದ್ದು),

'ನೀವಾರ' ಅನುವಾದಿತ ಕತೆಗಳು, ನೀಹಾರ' ಎಂಬ ಚಾರಿತ್ರಿಕ ಕಥಾ ಸಂಕಲನ, 'ಮಾತೃ ಶಾಪ' ಎಂಬ ಪೌರಾಣಿಕ ಕಾದಂಬರಿ; ನಿರ್ದೋಷಿ ಹುಮಾಯೂನ್, ಮಾಲತಿ ಮಾಧವ ಎಂಬ ಭವಭೂತಿಯ ಸಂಸ್ಕೃತ ನಾಟಕದ ಕನ್ನಡ ಅನುವಾದ, ಲೈಲಾಮಜ್ನು ಕನ್ನಡ ಅನುವಾದ, ಮಹಾಪ್ರಭು ಮಾಗಡಿ ಕೆಂಪೇಗೌಡ, ಶ್ರೀಕೃಷ್ಣಲೀಲೆ ಅಂತಹ ಹಲವಾರು ನಾಟಕಗಳನ್ನೂ ಕರೀಂಖಾನರು ರಚಿಸಿದ್ದರು.

(ಮುಂದಿನ ಪುಟಕ್ಕೆ...)

ಕರೀಂಖಾನರ ಚಿತ್ರಗೀತೆಗಳಾದ 'ನಟವರಗಂಗಾಧರ', 'ಜಯಗೌರಿ ಜಗದೀಶ್ವರಿ' ಬಾರೇ ನೀ ಚೆಲುವೆ' ಯಂತಹ ಮಧುರ ಗೀತೆಗಳು ಇಂದಿಗೂ ಕನ್ನಡ ಜನಮನದಲ್ಲಿ ಭದ್ರವಾಗಿ ನೆಲೆ ಊರಿವೆ. **ಕರೀಂಖಾನರು 300 ಕ್ಕೂ ಹೆಚ್ಚು ಚಿತ್ರಗೀತೆಗಳನ್ನು ಬರೆದರು**. ಸ್ವರ್ಣಗೌರಿ, ಜೀವನತರಂಗ, ಬೇವುಬೆಲ್ಲ, ಚಂದ್ರಕುಮಾರ, ದೇವಮಾನವ, ದೊಂಬರಕೃಷ್ಣ, ರಾಜೇಶ್ವರಿ, ಪತಿತಪಾವನಿ, ಸೂಪರ್ ನೋವಾ 455 ಮೊದಲಾದ 15 ಚಿತ್ರಗಳಿಗೆ ಉತ್ತಮ ಸಾಹಿತ್ಯ ಒದಗಿಸಿದರು.

**ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿಯೂ ಅವರು ಕಾರ್ಯನಿರ್ವಹಿಸಿದ್ದಾರೆ**.

ಶತಾಯುಷಿಯಾಗಿ 106 ವರ್ಷಗಳ ಕಾಲ ಬದುಕಿದ್ದ ಅವರು 2006 ರ ಜುಲೈ 29 ರಂದು ನಿಧನರಾದರು. ✩

## ಬಾಳು

ಕವಿತಾ ಕೆ.
ಸ.ಕಾ.ನಿ.ಇಂ.(ಕ)
ಜಯನಗರ ವಿಭಾಗ, ಬೆವಿಕಂ.



ಭುವಿಯ ಎದೆಯ ದಗೆಯಲ್ಲಿ,
ಅದರ ರಸವ ಹೀರಿ.
ಕಾದ ಸುಡು ಬಿಸಿಲಲ್ಲಿ,
ಹೊಯ್ವ ಮಳೆಯ ನೀರಲ್ಲಿ,
ತಂಪಾದ ಗಾಳಿಯಲಿ,
ಎದೆ ನಡುಗಿಸುವ ಚಳಿಯಲಿ.
ಎಲ್ಲ ಅಡೆತಡೆಗಳ ಮೀರಿ,
ತನ್ನೊಳಗಿನ ಭಾವದ ಕೆಚ್ಚೆದೆಯಲ್ಲಿ,
ಬೆಳೆದು ಹೆಮ್ಮರವಾಗಲು,
ಚಿಗುರೊಡೆಯಿತು
ಬಿತ್ತ ಮೊಳಕೆಯೊಳಗಿಂದ ಬಾಳು.

ತನ್ನ ಹೊಸ ದಿಗಂತದ ಬೆಳಕಿನೆಡೆಗೆ.
ಎದೆಯುಬ್ಬಿಸಿ, ಹಿಗ್ಗಿ ಕುಗ್ಗಿ,
ಮೇಲೇರುತ ತೂರುತ ತೂಗುತ
ಭೂತಾಯಿಯ ಗರ್ಭದಲ್ಲಿ ಹರಡಿತು
ತನ್ನ ಬೇರಿನ ಜಾಡು.

## ಬೆಂಗಳೂರಿನ ಬೀದಿ ದೀಪ

1905 ರವರೆಗೂ ಬೆಂಗಳೂರಿನಲ್ಲಿ ವಿದ್ಯುತ್ ಇರಲಿಲ್ಲವೆಂದರೆ, ಅಲ್ಲಿಯವರೆಗೂ ಬೀದಿ ದೀಪಗಳೂ ಇರಲಿಲ್ಲವೆ ಎಂಬ ಪ್ರಶ್ನೆ ಸಹಜ. ದಾಖಲೆಗಳ ಪ್ರಕಾರ 1905 ರ ಹೊತ್ತಿಗೆ ಬೆಂಗಳೂರಿನಲ್ಲಿ ಅಲ್ಲಲ್ಲಿ ನಿಲ್ಲಿಸಿದ 'ಲಾಂದ್ರಕಂಬ'ಗಳ ಮೇಲೆ ಸೀಮೆ ಎಣ್ಣೆಯಿಂದ ಉರಿಯುವ ಲಾಂದ್ರಗಳು ಉರಿಯುತ್ತಿದ್ದವು! ಪ್ರತಿದಿನ ಸಂಜೆ ಈ ದೀಪ ಹೊತ್ತಿಸಲು ಪ್ರತಿ ಸ್ಥಳದಲ್ಲಿ ಇಬ್ಬರು ಇರುತ್ತಿದ್ದರು! ಒಬ್ಬ ಮುಂದೆ ಮುಂದೆ ಸೀಮೆ ಎಣ್ಣೆ ತುಂಬುತ್ತಾ ಸಾಗಿದರೆ ಹಿಂದಿನಿಂದ ಒಬ್ಬ ದೀಪ ಬೆಳಗಿಸುತ್ತಾ ಬರುತ್ತಿದ್ದ, ಬೀದಿ ದೀಪಗಳ ನಿರ್ವಹಣೆಗಾಗಿ ವಾರ್ಷಿಕ 12000 ರೂಪಾಯಿಗಳ ಗುತ್ತಿಗೆ ನೀಡಲಾಗಿತ್ತು.



1905 ರಲ್ಲಿ ಬೆಂಗಳೂರಿಗೆ ವಿದ್ಯುತ್ ಆಗಮಿಸಿದ ನಂತರ ವಿದ್ಯುತ್ ಬೀದಿ ದೀಪಗಳನ್ನು ಅಳವಡಿಸುವ ಸಿದ್ಧತೆಗಳು ನಡೆದವು. ಬೆಂಗಳೂರು ಪುರಸಭೆ ಗೊಮೆಡ್‌ಗೆ (ಗವರ್ನಮೆಂಟ್ ಆಫ್ ಮೈಸೂರು ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟ್) ವಾರ್ಷಿಕ 15,000 ರೂಪಾಯಿಗಳನ್ನು ನೀಡುವ ಒಪ್ಪಂದದೊಂದಿಗೆ ಬೀದಿ ದೀಪಗಳನ್ನು ವಿದ್ಯುದೀಕರಣಗೊಳಿಸಿತು. 1905 ರ ಕೊನೆಯ ಹೊತ್ತಿಗೆ ಬೆಂಗಳೂರಿನಲ್ಲಿ ಒಟ್ಟು 1395 ವಿದ್ಯುತ್ ಬೀದಿ ದೀಪ ಅಳವಡಿಸಲಾಯಿತು. ನಂತರದ ದಿನಗಳಲ್ಲಿ ಪ್ರತಿ ಬೀದಿ ದೀಪದ ಅಳವಡಿಕೆಗೆ 30 ರೂಪಾಯಿಗಳ ಒಪ್ಪಂದದೊಂದಿಗೆ ಬೀದಿ ದೀಪಗಳ ನಿರ್ವಹಣೆ ಗೊಮೆಡ್ ತೆಕ್ಕೆಗೆ ಸಂದಿತು. 1908 ರಿಂದ ಬೀದಿ ದೀಪಗಳ ನಿರ್ವಹಣಾ ವೆಚ್ಚ ವಾರ್ಷಿಕ 20,000 ರೂಪಾಯಿಗಳಿಗೇರಿತು.

ಒಂದೊಂದೇ ದೀಪ ಹೊತ್ತಿಸುವ 'ಲಾಂದ್ರ ಕಂಬ'ಗಳ ನಿಧಾನಗತಿಯ ಕಾರ್ಯ ಸಮಾಪ್ತಿಗೊಂಡು ಒಮ್ಮೆಗೇ ಧಿಗ್ಗನೆ 'ದೀಪಕ' ರಾಗ ಹಾಡುವ, ಏಕಕಾಲದಲ್ಲಿ ಬೀದಿಯುದ್ದಕ್ಕೂ ಹಾಲು ಬೆಳಕು ಹರಿಸುವ ವಿದ್ಯುತ್ ಬೀದಿ ದೀಪ ಜನರನ್ನು ದಿಗ್ಭ್ರಮೆಗೊಳಿಸುತ್ತಾ ಬೆಳಗತೊಡಗಿತು! 1905 ರ ಆಗಸ್ಟ್ ಐದರ ಸಂಜೆ ಬೆಂಗಳೂರಿನ ಸಿಟಿ ಮಾರ್ಕೆಟ್ ಬಳಿ ಬೀದಿ ದೀಪ ಉದ್ಘಾಟಿಸುವ ಸಮಾರಂಭ ಅದ್ದೂರಿಯಾಗಿ ನಡೆಯಿತು. ಅಂದು ಊರಿನ ಪ್ರಮುಖರು ಸೇರಿದ್ದ ಸಭೆಯಲ್ಲಿ ಸರ್ ಜಾನ್ ಹೆವೆಟ್ ಅವರು ಗುಂಡಿ ಒತ್ತುವ ಮೂಲಕ ಬೆಂಗಳೂರು ಬೀದಿ ದೀಪಗಳನ್ನು ಹೊತ್ತಿಸಿ, ಹೊಸ ವಿದ್ಯಮಾನಕ್ಕೆ ನಾಂದಿ ಹಾಡಿದರು!

(ಸಂಗ್ರಹ ಲೇಖನ)

### ಹುಟ್ಟುಹಬ್ಬದ ಶುಭಾಶಯಗಳು

2021ನೇ ವರ್ಷದ ಜನವರಿ–ಮಾರ್ಚ್ ತಿಂಗಳಿನಲ್ಲಿ ಹುಟ್ಟುಹಬ್ಬ ಆಚರಿಸುತ್ತಿರುವ ಬೆಸ್ಕಾಂನ ಅಧಿಕಾರಿಗಳು, ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ" ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

– ಸಂಪಾದಕೀಯ ಮಂಡಳಿ



### ಹಾರ್ದಿಕ ಬೀಳ್ಕೊಡುಗೆ

ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗೆ ಶ್ರಮಿಸಿ 2021ನೇ ವರ್ಷದ ಜನವರಿ–ಮಾರ್ಚ್ ತಿಂಗಳಲ್ಲಿ ನಿವೃತ್ತಿ ಹೊಂದುತ್ತಿರುವ ಅಧಿಕಾರಿಗಳು / ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹಾರ್ದಿಕ ಬೀಳ್ಕೊಡುಗೆ.

– ಸಂಪಾದಕೀಯ ಮಂಡಳಿ

# ಇವರು ನಮ್ಮ ಸಾಹಿತಿಗಳು

## ಅ.ನ. ಕೃಷ್ಣರಾವ್



ಕನ್ನಡ ಸಾಹಿತ್ಯದ ಪ್ರಾತ: ಸ್ಮರಣೀಯರಲ್ಲಿ ಅ.ನ.ಕೃ.ಕೂಡ ಒಬ್ಬ ಪ್ರಮುಖರು.

**ಅರಕಲಗೂಡು ನರಸಿಂಗರಾವ್ ಕೃಷ್ಣರಾವ್ ಅವರು 1908 ರ ಮೇ 9 ರಂದು ಕೋಲಾರದಲ್ಲಿ ಜನಿಸಿದರು.**

**ಅನಕೃ** ಎಂದೇ ಹೆಸರಾದ ಅವರು ಸಾಹಿತಿಯಾಗಿ ಹಾಗೂ ಕನ್ನಡಪರ ಹೋರಾಟಗಾರರಾಗಿ ನಾಡಿನ ಉದ್ದಗಲಕ್ಕೂ ಚಿರಪರಿಚಿತರು. ಅವರ ಸಾಹಿತ್ಯ ಕೃಷಿ ಹಾಗೂ ಹೋರಾಟ ವೈವಿಧ್ಯಮಯವಾದುದು. ಕಾದಂಬರಿ ಸಾರ್ವಭೌಮರೆಂದು ಪ್ರಸಿದ್ಧರಾದರೂ ಸಹ ಅವರ ಸಾಹಿತ್ಯ ಕೃಷಿ ಆರಂಭವಾಗಿದ್ದು ನಾಟಕ ರಚನೆಯಿಂದ.

ತಂದೆ ನರಸಿಂಗರಾಯರ ಆತ್ಮೀಯ ಮಿತ್ರ ಖ್ಯಾತ ನಟ ಎ.ವಿ.ವರದಾಚಾರ್ ಅವರು ಒಮ್ಮೆ ಕನ್ನಡದಲ್ಲಿ ಸಾಮಾಜಿಕ ನಾಟಕಗಳ ರಚನೆಯ ಬಗ್ಗೆ ಮಾತನಾಡಿದಾಗ ಒಂದೇ ರಾತ್ರಿ ಅನಕೃ ಅವರು 'ಮದುವೆಯೋ ಮನೆಹಾಳೋ" ಎಂಬ ನಾಟಕ ರಚಿಸಿ ವರದಾಚಾರ್ ಅವರಿಂದಲೇ ಭೇಷ್ ಎನ್ನಿಸಿ ಕೊಂಡಿದ್ದರಂತೆ. ಧರ್ಮಸಂಕಟ, ಬಣ್ಣದ ಬೀಸಣಿಗೆ, ಸ್ವರ್ಣಮೂರ್ತಿ, ಹಿರಣ್ಯ ಕಶಿಪು, ಜಗಜ್ಯೋತಿ ಬಸವೇಶ್ವರ ಅವರ ಪ್ರಮುಖ ನಾಟಕ ಕೃತಿಗಳು.

ಜೀವನಯಾತ್ರೆ ಅವರ ಮೊದಲ ಕಾದಂಬರಿ, ಸಂಜೆಗತ್ತಲು, ಶನಿಸಂತಾನ, ನಗ್ನಸತ್ಯ, ಉದಯರಾಗ, ಸಂಧ್ಯಾರಾಗ, ಧರ್ಮಪತ್ನಿ, ನಟಸಾರ್ವಭೌಮ ಇತ್ಯಾದಿಗಳು ಅವರ ಪ್ರಮುಖ ಕಾದಂಬರಿಗಳು.

ಸಣ್ಣಕಥೆ ರಚನೆಯಲ್ಲೂ ಸಿದ್ಧಹಸ್ತರಾಗಿದ್ದ ಅವರು ಖ್ಯಾತ ಚಿತ್ರ ಕಲಾವಿದ ರಾಜಾರವಿವರ್ಮ ಅವರನ್ನು ಕುರಿತು ರಚಿಸಿದ ಗ್ರಂಥ ಕೂಡ ಉತ್ತಮ ಕೃತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ

ಅವರ ಕಾದಂಬರಿ 'ಸಂಧ್ಯಾರಾಗ' ಕೂಡ ಚಲನಚಿತ್ರವಾಗಿ ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಪಾತ್ರವಾಗಿದೆ.

1936 ರಲ್ಲಿ ಮುನ್ಷಿ ಪ್ರೇಮಚಂದ್ ಅವರ ಅಧ್ಯಕ್ಷತೆಯಲ್ಲಿ ಲಖನೌದಲ್ಲಿ ನಡೆದ ಅಖಿಲಭಾರತ ಪ್ರಗತಿಶೀಲ ಸಾಹಿತ್ಯದ ಲೇಖಕರ ಪ್ರಥಮ ಸಮ್ಮೇಳನದಲ್ಲಿ ಅನಕ್ಯ ಅವರ ಭಾಷಣ ಹಲವು ಲೇಖಕರ ಮೇಲೆ ಪ್ರಭಾವ ಬೀರಿತೆಂದು ಹಿರಿಯ ಸಾಹಿತಿಗಳು ಅಭಿಪ್ರಾಯ ಪಟ್ಟಿದ್ದಾರೆ.

**ಮಣಿಪಾಲದಲ್ಲಿ ನಡೆದ 42 ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯ ಗೌರವ ಕೂಡ ಅವರಿಗೆ ಲಭಿಸಿದೆ.**

ಕನ್ನಡಿಗರ ಸ್ವಾಭಿಮಾನಕ್ಕೆ ಧಕ್ಕೆ ಬರುವಂತಹ ಪ್ರಸಂಗಗಳು ನಡೆದಾಗಲೆಲ್ಲ ಹೋರಾಟದಲ್ಲಿ ತೊಡಗಿಸಿಕೊಳ್ಳುತ್ತಿದ್ದ ಅವರು 1971 ರ ಜುಲೈ 8 ರಂದು ನಿಧನರಾದರು.

ತಮ್ಮ 63 ನೇ ವಯಸ್ಸಿನಲ್ಲಿ ಅಸ್ತಂಗತರಾದರೂ ಸಹ ಅನಕೃ ಅವರು ಕನ್ನಡಿಗರ ಮನದಲ್ಲಿ ಅಜರಾಮರವಾಗಿದ್ದಾರೆ.

## ಮಹದೇವ ಬಣಕಾರ



ಸಾಮಾಜಿಕ ಚಿಂತಕ, ಕವಿ, ಲೇಖಕ ಹಾಗೂ ವಚನಕಾರರಾಗಿ ನಾಡಿನುದ್ದಗಲಕ್ಕೂ ಹೆಸರು ಮಾಡಿದ್ದವರು ಮಹದೇವ ಬಣಕಾರರು.

**ಬಣಕಾರರು ಅವಿಭಜಿತ ಧಾರವಾಡ ಜಿಲ್ಲೆ ಬ್ಯಾಡಗಿ ತಾಲ್ಲೂಕಿನ ಮೋಟೆ ಬೆನ್ನೂರಿನಲ್ಲಿ 1932 ರ ಅಕ್ಟೋಬರ್ 3 ರಂದು ಜನಿಸಿದರು.**

ಮನೆಯಲ್ಲಿ ಕಡುಬಡತನವಿದ್ದುದರಿಂದ ಹೇಗೋ ಕಷ್ಟಪಟ್ಟು ಪ್ರೌಢಶಿಕ್ಷಣವನ್ನು ಮುಗಿಸಿದರು.

ನಂತರ ಶಿಕ್ಷಣವನ್ನು ಮುಂದುವರಿಸಲಾಗದೆ ಹಳ್ಳಿಯಲ್ಲಿ ಎಮ್ಮೆಕಾಯುವ ಕೆಲಸ ಮಾಡುತ್ತಾ ಅವರು ಕಟ್ಟಿದ ಹಾಡುಗಳು ಕವನ ಹಾಗೂ ವಚನರೂಪದಲ್ಲಿ ಹೊರಹೊಮ್ಮಿದಾಗ ಆರಂಭದಲ್ಲಿ "ಕಾವ್ಯೋದಯ" ಎಂಬ ಕವನ ಸಂಕಲನವನ್ನು ಪ್ರಕಟಿಸಿದರು.

ಈ ಸಂಕಲನಕ್ಕೆ ಸಾಲಿ ರಾಮಚಂದ್ರರಾವ್ ಅವರು ಮುನ್ನುಡಿ ಬರೆದು ಹಾರೈಸಿದರು. ಇದರಿಂದ ಪ್ರೇರಿತರಾದ ಬಣಕಾರರ ಮುಂದಿನ ಕಾವ್ಯಕೃಷಿಯನ್ನು ಪ್ರೋತ್ಸಾಹಿಸಿದವರು ತರಳಬಾಳು ಜಗದ್ಗುರು ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು.

ಬಣ್ಣದಕಾರಂಜಿ, ಅಪರಂಜಿ, ಹೊಸಹುಟ್ಟು ಅವರ ಕಾವ್ಯ ಕೃತಿಗಳು, ಗರತಿಯ ಗೋಳು, ಕಲ್ಯಾಣ ಕ್ರಾಂತಿ, ಯಾರು ಹೊಣೆ, ಉರಿಲಿಂಗ ಪೆದ್ದಿ, ತಿಂದೋಡಿ, ಇತ್ಯಾದಿಗಳು ಅವರ ನಾಟಕಗಳು. ಮಾದನ ಮಗ, ಲೋಕದ ಕಣ್ಣು ಇತ್ಯಾದಿಗಳು ಕಥಾಸಂಕಲನಗಳು.

1108 ವಚನಗಳ 'ಮಹದೇವ ಬಣಕಾರರ ವಚನಗಳು', 'ವಿಶ್ವಬಂಧು ಮರುಳ ಸಿದ್ಧ' ಮತ್ತು 'ಶ್ರೀ ಶಿವಕುಮಾರ ಚರಿತೆ' ಬಣಕಾರರ ಮೇರು ಕೃತಿಗಳೆಂದು ಪರಿಗಣಿಸಲಾಗಿದೆ.

'ಆಂಗ್ಲರ ಆಡಳಿತದಲ್ಲಿ ಕನ್ನಡ ಅವರ ಇನ್ನೊಂದು ಪ್ರಮುಖ ಕೃತಿಯಾಗಿದೆ. ಸಾಹಿತ್ಯ ಕೃಷಿಗಷ್ಟೇ ತಮ್ಮನ್ನು ಸೀಮಿತಗೊಳಿಸಿಕೊಳ್ಳದ ಬಣಕಾರರು ಪತ್ರಕರ್ತರಾಗಿಯೂ ದುಡಿದಿದ್ದಾರೆ.

ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ನಡೆದ ಚಳವಳಿಯಲ್ಲಿ ಭಾಗವಹಿಸಿ ಜೈಲು ವಾಸವನ್ನೂ ಅನುಭವಿಸಿದರು.

ಶ್ರೇಷ್ಠವಾಗ್ಮಿಗಳಾಗಿದ್ದ ಅವರು ತಮ್ಮ ಮಾತಿನ ಮೋಡಿಯಿಂದ ಕೇಳುಗರನ್ನು ಸೆರೆಹಿಡಿಯಬಲ್ಲ ಚತುರತೆಯನ್ನು ಹೊಂದಿದ್ದರು.

**ವಿಧಾನಪರಿಷತ್ತಿನ ಸದಸ್ಯರಾಗಿ, ಕನ್ನಡ ಕಾವಲು ಮತ್ತು ಗಡಿಸಲಹಾ ಸಮಿತಿ ಸದಸ್ಯರಾಗಿ, ಪತ್ರಾಗಾರ, ಪ್ರಾದೇಶಿಕ ಸಮೀಕ್ಷಾ ಸಮಿತಿ ಮತ್ತು ಕನ್ನಡ ಭಾಷಾಂತರ ಸರಳೀಕರಣ ಸಮಿತಿ ಸದಸ್ಯರೂ ಆಗಿ ಕಾರ್ಯನಿರ್ವಹಿಸಿದ್ದಾರೆ.**

ಅವರ ಚೊಚ್ಚಲ ಕೃತಿಯಾದ ಕಾವ್ಯೋದಯಕ್ಕೆ ಮುಂಬಯಿ ಸರ್ಕಾರದ ಪ್ರಶಸ್ತಿ, ತಮ್ಮಣ್ಣರಾವ್ ಅಮ್ಮಿನಬಾವಿ ಸ್ಮಾರಕ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಕುವೆಂಪು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಮುಂತಾದ ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ.

ಒಟ್ಟಾರೆ 40 ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದ ಬಣಕಾರರು 2001 ರ ನವೆಂಬರ್ 17 ರಂದು ನಿಧನರಾದರು.



## ಬಸಳೆ



ಬಸಳೆ ಬಳ್ಳಿ ಅಥವಾ ಬಸಳೆ ಸೊಪ್ಪು, ಮರ, ಚಪ್ಪರ, ಬೇಲಿಗಳಲ್ಲಿ ಹಬ್ಬುವ ದಪ್ಪ, ಅಗಲ ಎಲೆಯ ಬಳ್ಳಿಯಾಗಿರುತ್ತದೆ.

ಮೃದುವಾದ ಕಾಂಡ ಉಳ್ಳ ಇದರಲ್ಲಿ 'ಎ' ಅನ್ನಾಂಗ ಅಧಿಕವಾಗಿರುತ್ತದೆ. ಮೀನು, ಮಾಂಸ, ಮೊಟ್ಟೆಗಳಲ್ಲಿ ಇರುವಷ್ಟೇ ಪ್ರೋಟೀನ್ ಪೌಷ್ಟಿಕಾಂಶ ಇದರಲ್ಲಿದೆ.

ಬಸಳೆ ಸೇವನೆಯಿಂದ ದೇಹದ ಉಷ್ಣ ಮತ್ತು ವಾತ ಕಡಿಮೆಯಾಗುತ್ತದೆ. ಮಲಬದ್ಧತೆಗೆ, ಹೊಟ್ಟೆಯಲ್ಲಿ ಉರಿ, ಬಾಯಿ ಹುಣ್ಣುಗಳ ನಿವಾರಣೆಗೆ ಸಹಕಾರಿ.

ಒಂದು ಹಿಡಿಯಷ್ಟು ಬಸಳೆ ಸೊಪ್ಪನ್ನು ಒಂದು ಚಿಟಿಕೆ ಉಪ್ಪು ಬೆರೆಸಿ ಹಸಿಯಾಗಿ ಬಾಯಲ್ಲಿ ಚಪ್ಪರಿಸಬೇಕು. ಪೂರ್ಣವಾಗಿ ಜಗಿದು 5 ನಿಮಿಷಗಳ ನಂತರ ಉಗುಳಬೇಕು. ಹೀಗೆ ದಿನಕ್ಕೆರಡು ಬಾರಿ ಮಾಡುವುದರಿಂದ ಬಾಯಿಹುಣ್ಣು, ರಕ್ತ ಸೋರುವುದು ನಿವಾರಣೆಯಾಗುತ್ತದೆ.

ಇದರಲ್ಲಿ ಅಧಿಕ 'ಎ' ಅನ್ನಾಂಗ ಇರುವುದರಿಂದ ಕಣ್ಣಿನ ದೋಷಗಳ ನಿವಾರಣೆಗೆ ಸಹಕಾರಿಯಾಗುತ್ತದೆ.

ಗರ್ಭಿಣಿ ಮತ್ತು ಮಕ್ಕಳ ತಾಯಂದಿರ ಆರೋಗ್ಯಕ್ಕಾಗಿ ಮತ್ತು ರಕ್ತದ ಕೊರತೆ ನಿವಾರಿಸಲು, ಹಲ್ಲಿನ ದೋಷ, ವಸಡು ಭದ್ರತೆ, ಉರಿಮೂತ್ರ ನಿವಾರಣೆಗೆ ಇದನ್ನು ಬಳಸುತ್ತಾರೆ. ನಿಶ್ಶಕ್ತಿ ಮತ್ತು ಆಯಾಸವನ್ನು ಕಡಿಮೆ ಮಾಡುತ್ತದೆ.

ಬಸಳೆ ಸೊಪ್ಪಿನಿಂದ ತಂಬುಳಿ ಮತ್ತು ದೋಸೆಯನ್ನು ಮಾಡುತ್ತಾರೆ.

## ಕಾಳು ಮೆಣಸು



ಮೆಣಸು, ಕಾಳು ಮೆಣಸು ಹಾಗೂ ಕರಿಮೆಣಸು ಎಂದು ಕರೆಯುವ ಈ ಸಾಂಬಾರ ಪದಾರ್ಥ ಜಗತ್ತಿನ ಎಲ್ಲಾ ಭಾಗದಲ್ಲೂ ಉಪಯೋಗದಲ್ಲಿದೆ.

ಇದು ರುಚಿಯಲ್ಲಿ ಖಾರವುಳ್ಳದ್ದಾಗಿರುತ್ತದೆ. ಅತ್ಯುತ್ತಮ ಜೀರ್ಣಕಾರಕ ಪದಾರ್ಥ. ಅಜೀರ್ಣ, ಹೊಟ್ಟೆಯುಬ್ಬರ, ಅತಿಸಾರ, ಆಯಾಸಗಳನ್ನು ಪರಿಹರಿಸುವಲ್ಲಿ ಇದು ಒಂದು ಸಿದ್ಧೌಷಧವಿದ್ದಂತೆ.

ಮೆಣಸಿನಿಂದ ತಯಾರಿಸಿದ ಕಷಾಯ, ಸಾರು, ದೇಹದ ಆರೋಗ್ಯವನ್ನು ಕಾಪಾಡುವುದರಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಕೆಮ್ಮು, ನೆಗಡಿ, ಶೀತಗಳಿಗೆ, ಹಲ್ಲುನೋವು, ವಸಡು ಬಾಧೆ ನಿವಾರಣೆಗೆ ಕಾಳುಮೆಣಸನ್ನು ಔಷಧವನ್ನಾಗಿ ಬಳಸುತ್ತಾರೆ.

ಮಿತವರಿತು ಇದರ ಸೇವನೆ ಮಾಡುವುದು ಉತ್ತಮ.

## ಬೆವಿಕಂ ವ್ಯಾಪ್ತಿಗೆ ಒಳಪಡುವ ಎಲ್ಲಾ ಕಛೇರಿಗಳಲ್ಲಿ ದಿನಾಂಕ 14.12.2020 ರಿಂದ 19.12.2020 ರ ವರೆಗೆ ಸಕಾಲ ಸಪ್ತಾಹವನ್ನು ಯಶಸ್ವಿಯಾಗಿ ಆಚರಿಸಲಾಯಿತು.



















## ಸಂಪಾದಕ ಮಂಡಳಿ


| | |
|---|---|
| **ಶ್ರೀ ಎಂ.ಬಿ.ರಾಜೇಶ್‌ಗೌಡ,** ವ್ಯವಸ್ಥಾಪಕ ನಿರ್ದೇಶಕರು | ಅಧ್ಯಕ್ಷರು |
| **ಶ್ರೀ ಡಾ. ಆರ್.ಸಿ.ಚೇತನ್,** ನಿರ್ದೇಶಕರು (ಹಣಕಾಸು) | ಮುಖ್ಯ ಸಂಪಾದಕರು |
| **ಶ್ರೀ ಹೆಚ್. ಶ್ರೀರಾಮೇಗೌಡ,** ನಿರ್ದೇಶಕರು (ತಾಂತ್ರಿಕ) | ಮುಖ್ಯ ಸಂಪಾದಕರು |
| **ಶ್ರೀ ಸೋಮಶೇಖರ್ ಬಿ.ಆರ್.** ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.) | ಸಂಪಾದಕರು |
| **ಶ್ರೀ ಕೆ. ತಿಪ್ಪೇಸ್ವಾಮಿ,** ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | ಸದಸ್ಯರು |
| **ಶ್ರೀ ಕೆ. ಬಲರಾಮ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ | ಸದಸ್ಯರು |
| **ಶ್ರೀ ರಾಮಚಂದ್ರರೆಡ್ಡಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಎಂ. ರವೀಂದ್ರ,** ಕವಿಪ್ರನಿನಿ ಎಸ್ಸಾಂಗಳ ಪ.ಜಾತಿ ಮತ್ತು ವರ್ಗದವರ ಅಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಕುಮಾರ್ ಮುದ್ದಣ್ಣನವರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮಾ ಇ. ಸಂಘ | ಸದಸ್ಯರು |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ / ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ


ವಿಳಾಸ : **ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.) ನಿಗಮ ಕಾರ್ಯಾಲಯ, ಬೆ.ವಿ.ಕಂಪನಿ, ಕೆ.ಆರ್.ವೃತ್ತ, ಬೆಂಗಳೂರು-560 001.**
ಇ-ಮೇಲ್ ವಿಳಾಸ : gmcr@bescom.co.in


ಬೆವಿಕಂ BESCOM

**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ 1912**
**ಸಂದೇಶ ಕಳುಹಿಸಿ 58888 ವೆಬ್‌ಸೈಟ್.**